(*b*) if so, whether the Government has taken any steps to give any concession to the agriculturists in collecting the compulsory levy ;

(*c*) whether the Government has also taken any decision to exempt the said agriculturists from collecting the land revenue ?

A.—Sri B. RACHAIAH (Minister for Revenue and Forests).—

(*a*) No; except in some villages of the eastern part of Gokak Taluk.

(*b*) Provisions already exist in all the four Procurement Levy Orders enabling the growers to establish partial or total failure of crops and to claim the refixation of the quantum of levy accordingly.

(*c*) No.

Sri B. B. SAYANAK.—Since the answers given to my questions are not correct, I do not want to ask any supplementary.

Sri DIGAMBARA RAO B. KALMANKAR.—In some villages in Gokak Taluka, crops have been damaged. I want to know whether any orders have been passed to suspend the collection of land revenue and the collection of levy.

†Sri B. RACAHIAH.—In such cases if the people are entitled to any such concession, the Depnty Commissioner has got powers to postpone the collection of the assessment.

Irrigation Schemes in South Kanara District

29. Sri B. BHASKAR SHETTY (Kaup).—Will the Minister for Public Works be pleased to state :

(*a*) the names of irrigation schemes that are to be started in South Kannara District in respect of which Estimates have been prepared from 1962 ;

(*b*) the names of irrigation schemes started after 1962 and that are yet to be completed;

(*c*) when these spillover works would be completed ?

A.—Sri ALUR HANUMANTHAPPA (Deputy Minister for Minor Irrigation).—

(*a*) (a) Medium Irrigation Project : Bijjur.
(b) Minor Irrigation Works : *vide* Statement 'A' placed on the Table of the House.*

(*b*) (a) Medium Irrigation Project : Bijjur.
(b) Minor Irrigation Projects *vide* Statement 'C' placed on the Table of the House.*

*Copies placed in the Mysore Legislature library *Vide* No. 5 dated 22nd Febraary 1968.

(SRI ALUR HANUMANTHAPPA)

(c) (a) Medium Projects : Bijjur Irrigation Projects can be programmed to be taken up for execution after the revised estimate is sanctioned.

(b) Minor Irrigation Works : They will be completed by the end of 1968-69.

ಶ್ರೀ ಬಿ. ಭಾಸ್ಕರಶೆಟ್ಟಿ.—ತಾವು ಉತ್ತರದಲ್ಲಿ ಕೊಟ್ಟಿರುವ ಪಟ್ಟಿಯನ್ನು ನೋಡಿದರೆ ಐಟಂ 19ರಲ್ಲಿ Vented dam across Sukathu Hole ಗಾಗಿ ಅಂದಾಜು 30 ಸಾವಿರ ತಯಾರಾಗಿರುವುದರಿಂದ ಸುಮಾರು 54.77 ಲಕ್ಷ ಎಕರೆಗೆ ನೀರು ಸಿಗುತ್ತದೆ ಆದರೆ ಇಲ್ಲಿ ತಾವು ಕೆಲಸ ಮಾಡುತ್ತಿರುವುದಕ್ಕಾಗಿ ಸುಮಾರು 39 ಸಾವಿರದಷ್ಟು ಹಣ ಖರ್ಚು ಮಾಡಿ ಕೇವಲ 761 ಎಕರೆಗಳಿಗೆ ಮಾತ್ರ ನೀರು ಸಿಗುತ್ತದೆ. ಹೀಗೆ ಹೆಚ್ಚು ಪ್ರಯೋಜನ ಸಿಗುವ ಕೆಲಸಗಳನ್ನು ಬಿಟ್ಟು ಹೆಚ್ಚು ಖರ್ಚಾಗುವ ಕೆಲಸಗಳನ್ನು ತೆಗೆದುಕೊಂಡು ಮಾಡುವುದಕ್ಕೆ ಕಾರಣವೇನು ?

† ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳುವುದು ನೋಡಿದರೆ ಸುಮಾರು ಮೂರು ಲಕ್ಷದಷ್ಟು ಕೆಲಸ ಮಾಡಲು ಪ್ರಯತ್ನ ಮಾಡಿದರೂ ಕೇವಲ 761 ಎಕರೆಗಳಿಗೆ ಮಾತ್ರ ನೀರುಸಿಗುತ್ತೆ. ಇದನ್ನು ಏಕೆ ಪರಿಶೀಲನೆ ಮಾಡಬಾರದು ಎಂದು ಹೇಳುತ್ತಿದ್ದಾರೆ. ಇದನ್ನೂ ನೋಡಿ ತೆಗೆದುಕೊಳ್ಳಬೇಕಾಗುತ್ತದೆ .ಇವೆಲ್ಲಾ ಇನ್ನೂ ಮುಂದುವರಿದಾಗದೆ ಇರುವ ಕೆಲಸಗಳು. ಈಗಾಗಲೇ ಕೆಲಸ ನಡೆಯುತ್ತಿರುವುದು ಮುಂದುವರುಮಾಡಿರುವ ಕೆಲಸಗಳು. ಈಗ ಮಾನ್ಯ ಸದಸ್ಯರು ಇದರ ಬಗ್ಗೆಯೂ ಹೇಳುತ್ತಿದ್ದಾರೆ. ಇದನ್ನೂ ನೋಡಿ ಪರಿಶೀಲನೆ ಮಾಡಿ ಅನಂತರ ಮುಂದುರು ಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಪರಿಶೀಲನೆಯನ್ನು ಇನ್ನೆಷ್ಟು ದಿವಸಗಳಲ್ಲಿ ಮಾಡುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಇದಕ್ಕೆಲ್ಲಾ ಎಸ್ಟಿಮೇಟುಗಳು ತಯಾರಾಗಬೇಕು. ಅವೆಲ್ಲಾ ಬಂದಮೇಲೆ ನೋಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮೈನರ್ ಇರಿಗೇಷನ್ ಕೆಲಸಗಳನ್ನು ಮುಂಜೂರು ಮಾಡುವಾಗ ಟೆಕ್ನಿಕಲ್ ಫೀಸಿಬಿಲಿಟಿಯನ್ನು ನೋಡಿ ಮುಂಜೂರು ಮಾಡುತ್ತೀರಾ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—ಟೆಕ್ನಿಕಲ್ ಫೀಸಬಿಲಿಟಿಯನ್ನು ನೋಡೇ ಮುಂಜೂರಾತಿ ಕೊಡತಕ್ಕದ್ದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪಟ್ಟಿಯಲ್ಲಿರುವ ಐಟಂ 20 ರಲ್ಲಿ ಕೊಟ್ಟಿರುವ ಕೆಲಸ ಎಂದರೆ ಹೆಚ್ಚು ನೀರಾವರಿ ಆಗುವ ಪ್ರದೇಶವನ್ನು ಬಿಟ್ಟು ಕಡಿಮೆ ನೀರಾವರಿಗಾಗಿ ಹೆಚ್ಚು ಖರ್ಚು ಮಾಡುವ ಕೆಲಸಗಳಿಗೆ ಆದ್ಯತೆ ಕೊಡುತ್ತಿದ್ದೀರಿ. ಇದಕ್ಕೆ ಬದಲಾಗಿ ಹೆಚ್ಚು ಭಾಗಗಳಿಗೆ ನೀರಿನ ಸೌಲಭ್ಯ ಸಿಗುವಂತೆ ಹೆಚ್ಚು ನೀರಾವರಿಯಾಗುವ ಪ್ರದೇಶಗಳಿಗೆ ಖರ್ಚು ಮಾಡಿದರೆ ಅನುಕೂಲವಾಗುವುದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲ ತಾಲ್ಲೂಕುಗಳಲ್ಲಿಯೂ ಎಷ್ಟೆಷ್ಟು ಕೆಲಸಗಳು ಮಾಡುತ್ತಿದ್ದಾರೆ ಮತ್ತು ಎಷ್ಟು ಕೆಲಸಗಳನ್ನು ಮುಂದಿನ ವರ್ಷದಲ್ಲಿ ತೆಗೆದುಕೊಳ್ಳಬೇಕು ಇವನ್ನೆಲ್ಲಾ ಪರಿಶೀಲನೆ ಮಾಡಿ ನೋಡೇ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಕಮ್ಮಿ ಹಣ ಖರ್ಚು ಮಾಡಿ ಜಾಸ್ತಿ ಪ್ರಯೋಜನ ಪಡೆಯುವ ಕೆಲಸಗಳನ್ನು ತೆಗೆದುಕೊಳ್ಳುವುದು ಸರಕಾರದ ನೀತಿಯೋ ಇಲ್ಲವೇ ಹೆಚ್ಚು ಹಣ ಖರ್ಚುಮಾಡಿ ಏನೂ ಪ್ರಯೋಜನವಾಗದ ಕೆಲಸಗಳನ್ನು ಮಾಡುವುದು ಸರಕಾರದ ನೀತಿಯೋ ? ಇದು ದೇಶದ್ರೋಹದ ನೀತಿಯಾಗುವುದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಕೆಲಸಗಳ ಹಿತ್ತಡವಿಂದ ಹಾಗೆ ಹೇಳುತ್ತಿದ್ದಾರೆಂದು ತೋರುತ್ತೆ. ಕಮ್ಮಿ ಖರ್ಚುಮಾಡಿ ಹೆಚ್ಚು ಭೂಮಿಗೆ ನೀರಿನ ಸಹಾಯ ಒದಗುವಂತೆ ಮಾಡುವುದೇ ಸರಕಾರದ ಉದ್ದೇಶವಾಗಿದೆ ಮತ್ತು ಇದಕ್ಕೆ ಮೊದಲು ಪ್ರಾಶಸ್ತ್ಯ ಕೊಡುವುದೇ ಸರಕಾರದ ಇಚ್ಛೆಯಾಗಿದೆ.